ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿಶೇಷ ಮಾಧರಿ ನವಜಾತ ಶಿಶು ಘಟಕವನ್ನು ಪ್ರಾರಂಭಿಸಲಾಗಿದ್ದು, ಯೂನಿಸೆಫ್ (UNICEF) ನ ನಿಯಮದಂತೆ ನವಜಾತ ಶಿಶು ಘಟಕವನ್ನು ಉನ್ನತಿಕರಣ ಮಾಡಲು ಹಾಗೂ ನವಜಾತ ಶಿಶು ಘಟಕವು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಸದರಿ ಘಟಕಕ್ಕೆ ಉಪಕರಣ, ಪೀಠೋಪಕರಣಗಳು ಮತ್ತು ಲಿನನ್ ಸಾಮಾಗ್ರಿಗಳ ಅವಶ್ಯಕತೆಯಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಮಕ್ಕಳ ಶಾಸ್ತ್ರ ವಿಭಾಗ, ರಿಮ್ಸ್, ರಾಯಚೂರು ಇವರು ಯೂನಿಸೆಫ್ (UNICEF) ನ ನಿಯಮದಂತೆ ಅವಶ್ಯವಿರುವ ಉಪಕರಣ, ಪೈಪ್‌ಲೈನ್ ಕಾಮಗಾರಿ, ಪೀಠೋಪಕರಣಗಳು, ಲಿನನ್ ಸಾಮಾಗ್ರಿಗಳ ಪಟ್ಟಿಯನ್ನು ಸಿದ್ದಪಡಿಸಿ, ಅದಷ್ಟು ತ್ವರಿತವಾಗಿ ಸಾಮಾಗ್ರಿಗಳನ್ನು ಪೂರೈಸುವಂತೆ ಕೋರಿರುತ್ತಾರೆ. ಅದರ ವಿವರ ಈ ಕೆಳಗಿನಂತಿದೆ.

1. SNCU equipments list to be purchased for Phase one

| Sl No | List of SNCU Equipments for Phase one | Existing quantity | Additional needed | Approx unit cost | Approx total cost | Remarks |
|---|---|---|---|---|---|---|
| 1 | Open care system: radiant warmer, fixed height, with trolley, drawers,O2-bottles | 9 | 30 | 50000 | 1500000 | Suggested Zeal or Phoenix company |
| 2 | Double surface Phototherapy Unit with timer | 3 | 20 | 35835 | 716700 | |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| | | | | | | |
|---|---|---|---|---|---|---|
| 3 | Syringe Pump, 10,20,50 ml | 5 | 15 | 26215 | 393225 | As per previous purchase rates and order. |
| 4 | Infant Bassinet | 0 | 10 | 12542 | 125420 | |
| 5 | Pump Suction, portable 220V w/accessories | 0 | 10 | 12414 | 124140 | |
| 6 | Electronic Baby Scales (5kg-10gm) | 0 | 5 | 4290 | 21450 | |
| 7 | Suction Pump, foot operated | 0 | 4 | 2000 | 8000 | |
| 8 | Oxygen Hood | 5 | 30 | 1890 | 56700 | |
| 9 | Resuscitator 500 ml | 0 | 10 | 1330 | 13300 | |
| 10 | Resuscitator 250 ml | 0 | 20 | 1277 | 25540 | |
| 11 | Mobile X-Ray, 60 mA,2.5 KW | 0 | 1 | 298999 | 298999 | As per previous purchase rates and order with specifications provided by Unicef |
| 12 | Oxygen Concentrator Dual patient | 0 | 4 | 45000 | 180000 | |
| | Total cost | | | | 3463474 | |

2. SNCU equipments list to be purchased for Phase one Local Purchase

| SNCU equipments list to be purchased for Phase one Local Purchase | | | |
|---|---|---|---|
| SNCU Equipments list Local Purchase | Required quantity | Approx Unit cost | Approx total cost |
| Crash Cart | 6 | 17000 | 102000 |
| Refrigerator, 310 Ltrs. & 110 ltrs (double door, each one) | 2 | 10000 | 20000 |
| Washing Machine with dryer, automatic, 5Kg (front load) | 1 | 8500 | 8500 |
| Laryngoscope Set Neonatal | 20 | 4738 | 94760 |
| Infanto meter, plexi, 105 cm length | 2 | 2500 | 5000 |
| Room Heaters, 1000KW | 3 | 2000 | 6000 |
| Glucometer | 5 | 1750 | 8750 |
| Stethoscope, neonatal | 30 | 800 | 24000 |
| Wall Clock, Large Dial | 4 | 500 | 2000 |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| | | | |
|---|---|---|---|
| Digital Thermometer | 5 | 200 | 1000 |
| Room Thermometer, ambient temp | 5 | 200 | 1000 |
| X Ray view Box (LED) | 5 | 5000 | 25000 |
| Tape, measure, vinyl-coated, 1.5m in length | 25 | 200 | 5000 |
| Hub cutter, Syringe | 4 | 4000 | 16000 |
| Instrument trolleys | 8 | 6000 | 48000 |
| Desktop computer | 1 | 40000 | 40000 |
| Steel racks | 4 | 4000 | 16000 |
| Steel cupboards | 3 | 6000 | 18000 |
| | | | 441010 |

3. SNCU Furniture and miscellaneous items

| | Essential items required for SNCUs: | | | |
|---|---|---|---|---|
| Sl. No. | Name of the item | Quantity | Approx. Unit cost in Rs. | Total cost in Rs. |
| 1 | Slippers (Pairs) | 40 | 100 | 4000 |
| 2 | Slipper racks | 4 | 250 | 1000 |
| 3 | Gowns for staff and mothers | 50 | 200 | 10000 |
| 4 | Small size foot operated waste bins | 40 | 100 | 4000 |
| 5 | Bio-Medical Waste bins(Set of 3) | 3 | 4500 | 13500 |
| 6 | Long stainless steel chairs(3 seater) | 7 | 3000 | 21000 |
| 7 | Plastic chairs | 20 | 300 | 6000 |
| 8 | Recline chairs (for KMC) | 10 | 700 | 7000 |
| 9 | Television (LED 40 inch with Pen drive provision) | 1 | 40000 | 40000 |
| 10 | Pen drive "8 GB" | 2 | 500 | 1000 |
| 11 | Office Tables (1 large for control room) | 6 | 2000 | 12000 |
| 12 | Doctor's Chairs (Executive) | 4 | 1500 | 6000 |
| 13 | Chairs (red coloured chairs) | 12 | | 0 |
| 13 | Cardiac tables (KMC purpose) | 2 | 1500 | 3000 |
| 15 | Fire Extinguishers | 5 | 10000 | 50000 |
| 16 | Drinking Water purifier (RO) | 1 | 17000 | 17000 |
| 17 | Induction stove (for fluid preparation) | 2 | 3000 | 6000 |
| 18 | Hand dryers | 3 | 5000 | 15000 |
| 19 | Mike system (Portable, electrical) | 1 | 8000 | 8000 |
| 20 | Water geezer (25 L) | 1 | 10000 | 10000 |
| | | | Total Cost | 234500 |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

## 4. Estimate for NICU Pipelining work

| Sl no | Items | Qty | Unit rate | Total amt |
|---|---|---|---|---|
| 1 | 22mm copper tube | 92 mtr | 680 | 62560 |
| 2 | 15mm copper tube | 112 mtr | 550 | 61600 |
| 3 | 10mm copper tube | 106 mtr | 440 | 46640 |
| 4 | Oxygen Outlets | 19 nos | 2100 | 39900 |
| 5 | Vaccum Outlets | 19 nos | 2100 | 39900 |
| 6 | Air Outlets | 19 nos | 2100 | 39900 |
| 7 | Oxygen flow meter | 48 nos | 1700 | 81600 |
| 8 | ward vaccum unit 600ml | 48 nos | 2200 | 105680 |
| 9 | Refixing Bedhead pannel | 29 nos | 2000 | 58000 |
| | Total | | | 535780 |

ಕಾರಣ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಮಕ್ಕಳ ಶಾಸ್ತ್ರ ವಿಭಾಗ, ರಿಮ್ಸ್, ರಾಯಚೂರು ಇವರು ಕೋರಿರುವಂತೆ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನವಜಾತ ಶಿಶು ಘಟಕವನ್ನು ಉನ್ನತಿಕರಣ ಮಾಡಲು ಹಾಗೂ ನವಜಾತ ಶಿಶು ಘಟಕವು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ರೂ. 34,63,474/- + ರೂ. 4,41,010/- = ರೂ. 39,04,484/- ಅಡಿಯಲ್ಲಿ ಉಪಕರಣಗಳನ್ನು ಹಾಗೂ ರೂ. 2,34,500/- ಗಳ ವೆಚ್ಚದಲ್ಲಿ ಪೀಠೋಪಕರಣಗಳನ್ನು, ಪೈಪ್‌ಲೈನ್ ಕೆಲಸಕ್ಕಾಗಿ ರೂ. 5,35,780/- ಗಳು ಮತ್ತು Washing Plant ನಿರ್ಮಾಣ ಮಾಡುವ ಸಂಬಂಧ ರೂ. 1,10,000/- ಹೀಗೆ ಒಟ್ಟು ರೂ. 47,84,764/- ಗಳ ವೆಚ್ಚದಲ್ಲಿ ನವಜಾತ ಶಿಶು ಘಟಕಕ್ಕೆ ಉಪಕರಣ, ಪೀಠೋಪಕರಣಗಳನ್ನು ಖರೀದಿಸಲು ಹಾಗೂ ಇತರ ಕಾಮಗಾರಿಗಳನ್ನು ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಲೆಕ್ಕಶಿರ್ಷಿಕೆ | 2014-15ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಒಟ್ಟು ಖರ್ಚಾದ ಅನುದಾನ | ಬಾಕಿ ಉಳಿದ ಅನುದಾನ |
|---|---|---|---|---|
| 1 | 2210-05-105-1-54-101 (ಯೋಜನೆ) | 91908000 | 91908000 | 0 |
| 2 | 2210-05-105-1-54-101 (ಯೋಜನೇತರ) | 225200000 | 160423640 | 64776360 |
| | ಒಟ್ಟು | 317108000 | 252331640 | 64776360 |

**ಸಭೆಯ ತೀರ್ಮಾನ :-**

**ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನವಜಾತ ಶಿಶು ಘಟಕವನ್ನು ಉನ್ನತಿಕರಣ ಮಾಡಲು ಹಾಗೂ ನವಜಾತ ಶಿಶು ಘಟಕವು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಜರುಗಿಸಲು ಒಟ್ಟು ಅಂದಾಜು ರೂ. 47,84,764/- ಗಳ ವೆಚ್ಚದಲ್ಲಿ ಅವಶ್ಯವಿರುವ ಉಪಕರಣ, ಪೀಠೋಪಕರಣ, ಪೈಪ್‌ಲೈನ್ ಮತ್ತು Washing Plant ನಿರ್ಮಾಣವನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ, ಪೂರೈಸಿಕೊಳ್ಳಲು ಹಾಗೂ ಈ ವೆಚ್ಚವನ್ನು ಈ ಸಂಸ್ಥೆಯ 2014-15ನೇ ಸಾಲಿನಲ್ಲಿ ಲೆಕ್ಕಶಿರ್ಷಿಕೆ 2210-05-105-1-54-101 ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ಮೊತ್ತದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಲಾಯಿತು.**

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ – 12 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ "ಸಿ" ಹಾಗೂ ಗ್ರೂಪ್ "ಡಿ" ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರು ಪಾವತಿಸುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ದಿನಾಂಕ 16.08.2007 ರಿಂದ ಪ್ರಾರಂಭಗೊಂಡಿದ್ದು, ಪ್ರಾರಂಭದಲ್ಲಿ ಸಂಸ್ಥೆಯ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವ ಹಿತದೃಷ್ಟಿಯಿಂದ ಮತ್ತು ಇದೇ ಸಮಯದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ಮೊದಲನೇ ಹಂತದ ನವೀಕರಣಕ್ಕೆ ಸಂಸ್ಥೆಗೆ ಯಾವುದೇ ಸಮಯದಲ್ಲಿ ಭೇಟಿ ನೀಡುವ ಸಾಧ್ಯತೆಯಿದ್ದುದರಿಂದ ಸಂಸ್ಥೆಗೆ ಬೇಕಾದ ಅವಶ್ಯಕ ಗ್ರೂಪ್ "ಸಿ" ಹಾಗೂ ಗ್ರೂಪ್ "ಡಿ" ಸಿಬ್ಬಂದಿಗಳನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 12.09.2006ರನ್ವಯ ಈ ಸಂಸ್ಥೆಗೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ 21 ಪ್ರ.ದ.ಸ, ದ್ವಿ.ದ.ಸ – 01, ವೈದ್ಯಕೀಯ ದಾಖಲಾತಿ ತಂತ್ರಜ್ಞರು –03, ಪ್ರಯೋಗಶಾಲ ತಂತ್ರಜ್ಞರು – 02, ಕ್ಷ–ಕಿರಣ ತಂತ್ರಜ್ಞರು – 02, ಕಲಾವಿದ – 01, ಓಟಿ ತಂತ್ರಜ್ಞರು – 04, ಸಹಾಯಕ ಗ್ರಂಥಪಾಲಕರು – 01, ವಿದ್ಯುತ್‌ಕರ್ಮಿಗಳು – 02, ಪ್ಲಂಬರ್ – 01, ದೈಹಿಕ ಶಿಕ್ಷಕರು – 01, ವಾಹನ ಚಾಲಕರು – 03 ಮತ್ತು 76 ಗ್ರೂಪ್ ಡಿ ನೌಕರರನ್ನು ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಲಾಗಿತ್ತು.

ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳು ಸಂಸ್ಥೆಯ ಆಡಳಿತ ಸುಗಮವಾಗಿ ಸಾಗಿಸುವಲ್ಲಿ ಮತ್ತು ಭಾರತೀಯ ವೈದ್ಯಕೀಯ ಪರಿಷತ್ತಿನ ಅನುಮೋದನೆ ಪಡೆಯಲು ಹಗಲು ರಾತ್ರಿ ಅವಿರತ ಪ್ರಯತ್ನ ಮಾಡಿದ್ದಾರಲ್ಲದೇ ದಿನಂಪ್ರತಿ ಸರ್ಕಾರದೊಂದಿಗೆ ಪತ್ರ ವ್ಯವಹಾರ, ಕಡತಗಳ ರಕ್ಷಣೆ, ಕಟ್ಟಡ ಮತ್ತು ಕಾಮಗಾರಿಗಳ ವಿವರ, ಸಿಬ್ಬಂದಿ ವೆಚ್ಚ, ವಸ್ತುಗಳ ಖರೀದಿ ಮತ್ತು ನಿರ್ವಹಣೆ, ಲೆಕ್ಕ ಪತ್ರ ನಿರ್ವಹಣೆ, ಭಾರತೀಯ ವೈದ್ಯಕೀಯ ಮಂಡಳಿಯ ಕಾರ್ಯಕಲಾಪಗಳು, ಇಲಾಖ ನಿರ್ವಹಣೆ, ಶೈಕ್ಷಣಿಕ ವ್ಯವಹಾರಗಳ ಕಾರ್ಯಗಳು, ವಿದ್ಯಾರ್ಥಿಗಳ ಪ್ರವೇಶ, ಪರೀಕ್ಷೆ ಮತ್ತು ಅವರ ಕ್ಷೇಮ ಪಾಲನೆ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ. ಈ ಸಂಚಿತ ವೇತನದ ಸಿಬ್ಬಂದಿಗಳು ಆಡಳಿತದಲ್ಲಿ ಸಂಪೂರ್ಣ ಅನುಭವವನ್ನು ಹೊಂದಿದ್ದು, ಹಾಗು ಅವರಿಗೆ ವಹಿಸಿರುವ ಜವಾಬ್ದಾರಿಯನ್ನು ಚಾಚು ತಪ್ಪದೇ ಕೆಲಸಗಳನ್ನು ನೆರವೇರಿಸುತ್ತಿದ್ದಾರೆ. ಅವರ ಸೇವೆಯು ತೃಪ್ತಿಕರವಾಗಿರುತ್ತದೆ.

ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳು ಸದ್ಯ ನೀಡುತ್ತಿರುವ ವೇತನವು ತುಂಬಾ ಕಡಿಮೆಯಾಗಿದ್ದು, ಇತ್ತೀಚಿನ ಮಾರುಕಟ್ಟೆ ಬೆಲೆಗಳ ಏರಿಕೆಯಿಂದ, ಸದ್ಯ ನೀಡುತ್ತಿರುವ ವೇತನದಲ್ಲಿ ಸಿಬ್ಬಂದಿಗಳು ಅವರನ್ನು ಮತ್ತು ಅವಲಂಬಿಸಿದ ಕುಟುಂಬ ಸದಸ್ಯರನ್ನು ಪೋಷಿಸುವುದು ತುಂಬಾ ಕಷ್ಟಕರವಾಗಿದ್ದು, ಈ ಹಿನ್ನಲೆಯಲ್ಲಿ ಸಿಬ್ಬಂದಿಗಳ ಹಾಗೂ ಅವರ ಕುಟುಂಬದವರು (ತಂದೆ, ತಾಯಿ ಮತ್ತು ಮಕ್ಕಳು) ಕರ್ನಾಟಕ ಸರ್ಕಾರವು ನಿಗದಿ ಪಡಿಸಿದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆದ ಸಂಧರ್ಭದಲ್ಲಿ ಅದಕ್ಕೆ ವೆಚ್ಚವಾಗುವ ವೈದ್ಯಕೀಯ ವೆಚ್ಚದ ಬಿಲ್ಲನ್ನು ಮರು ಪಾವತಿಸಿದಲ್ಲಿ ತುಂಬಾ ಅನುಕೂಲವಾಗುತ್ತದೆಯಂದು ಹಲವು ಬಾರಿ ಕೋರಿರುತ್ತಾರೆ.

ಕಾರಣ ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಹಾಗೂ ಅವರುಗಳ ಕುಟುಂಬದ (ತಂದೆ, ತಾಯಿ ಮತ್ತು ಮಕ್ಕಳು) ಹಿತದೃಷ್ಟಿಯಿಂದ ಸಿಬ್ಬಂದಿಯವರು ಕರ್ನಾಟಕ ಸರ್ಕಾರವು ನಿಗದಿ ಪಡಿಸಿದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆದ ಸಂಧರ್ಭದಲ್ಲಿ ಅದಕ್ಕೆ ವೆಚ್ಚವಾಗುವ ವೈದ್ಯಕೀಯ ವೆಚ್ಚದ ಬಿಲ್ಲಿನಲ್ಲಿ ಕ್ಲೇಮು ಮಾಡಿರುವ ದರಗಳು ಸರ್ಕಾರದಿಂದ ನಿಗದಿಪಡಿಸಿದ ದರಗಳ ಪ್ರಕಾರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರು ಪಾವತಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಭೆಯ ತೀರ್ಮಾನ :–

ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಕ್ಲೇಮ್ ಮಾಡಿರುವ ದರಗಳು ಕರ್ನಾಟಕ ಸರ್ಕಾರದಿಂದ ನಿಗದಿಪಡಿಸಿರುವ ದರಗಳನ್ವಯ ಕರ್ನಾಟಕ ಸರ್ಕಾರದಿಂದ ಚಿಕಿತ್ಸೆ ಪಡೆಯಲು ಅನುಮೋದನೆ ನೀಡಿರುವ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಲ್ಲಿ, ಸದರಿ ಬಿಲ್ಲುಗಳನ್ನು ವೈದ್ಯಕೀಯ ಅಧೀಕ್ಷಕರ ಮುಖಾಂತರ ಧೃಡಿಕರಿಸಿಕೊಂಡು ಪಾವತಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ. – 13 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಗಣಕ ಯಂತ್ರ ಡಿ.ಜಿ.ಎಸ್ & ಡಿ ದರದಲ್ಲಿ ಹಾಗೂ ಪ್ರಿಂಟರ್‌ಗಳನ್ನು ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

ಪ್ರಸ್ತುತ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 08 ವಿಭಾಗಗಳು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ 13 ವಿಭಾಗಗಳಿದ್ದು, ಇನ್ನು ಕೆಲವು ವಿಭಾಗಗಳಲ್ಲಿ ಗಣಕ ಯಂತ್ರ ಹಾಗೂ ಪ್ರಿಂಟರ್‌ಗಳಿರುವುದಿಲ್ಲ. ಇದರಿಂದಾಗಿ ವಿಭಾಗಗಳ ಕೆಲಸ ಕಾರ್ಯಗಳಿಗೆ ತುಂಬಾ ಅಡಚಣೆ ಉಂಟಾಗಿದ್ದು, ಹೊರರೋಗಿ ಹಾಗೂ ಒಳರೋಗಿ ವಿಭಾಗಗಳಲ್ಲಿ ಸಹ ಗಣಕ ಯಂತ್ರ ಹಾಗೂ ಪ್ರಿಂಟರ್‌ಗಳ ಕೊರತೆಯಿರುತ್ತದೆ. ಭಾರತೀಯ ವೈದ್ಯಕೀಯ ಮಂಡಳಿಯು ಸಂಸ್ಥೆಗೆ ಭೇಟಿ ನೀಡಿದ ಸಮಯದಲ್ಲಿ ಪ್ರತಿಯೊಂದು ವಿಭಾಗಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡುತ್ತದೆ. ಒಂದು ವೇಳೆ ನ್ಯೂನತೆಗಳಿದ್ದಲ್ಲಿ ಆಕ್ಷೇಪಣೆಯನ್ನು ಸಲ್ಲಿಸುತ್ತಾರೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಹಲವು ವಿಭಾಗದ ಮುಖ್ಯಸ್ಥರುಗಳು ಗಣಕ ಯಂತ್ರ ಹಾಗೂ ಪ್ರಿಂಟರ್‌ಗಳನ್ನು ಅತಿ ಜರೂರಾಗಿ ಒದಗಿಸುವಂತೆ ಕೋರಿ ವಿವಿಧ ದಿನಾಂಕಗಳಂದು ಈ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಅದರ ವಿವರ ಈ ಕೆಳಗಿನಂತಿದೆ.

| Sl No | Dept Name | Computer | Printer |
|---|---|---|---|
| 1 | Biochemistry | 01 | 01 |
| 2 | Anatomy | 01 | 01 |
| 3 | Physiology | 01 | 01 |
| 4 | Pathology | 01 | 01 |
| 5 | Orthopedic | 01 | 01 |
| 6 | Gen. Medicine | 01 | 01 |
| 7 | Gen. Surgery | 01 | 01 |
| 8 | Anesthesiology | 01 | 01 |
| 9 | Store | 01 | 01 |
| 10 | MRD | 01 | 01 |
| 11 | Tender Section | 01 | 01 |
| 12 | Reception counter | 04 | 04 |
| 13 | Rajiv Gandhi Super Specialty Hospital, Raichur | 05 | – |
| | Total | 20 | 15 |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸದರಿ ಗಣಕ ಯಂತ್ರ ಹಾಗೂ ಪ್ರಿಂಟರ್‌ಗಳು ಡಿಜಿಎಸ್& ಡಿ ದರದಲ್ಲಿ ಲಭ್ಯವಿದ್ದು, ಡಿಜಿಎಸ್& ಡಿ ದರದಲ್ಲಿ ನೇರವಾಗಿ ಖರೀದಿಸಲು ಕೆಟಿಪಿಪಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಡಿಜಿಎಸ್& ಡಿ ದರಗಳನ್ವಯ Intel Core i3 ನ ಪ್ರತಿ ಗಣಕಯಂತ್ರ ರೂ.38,500/-(ತೆರಿಗೆ ಪ್ರತ್ಯೇಕ) ಗಳಾಗುತ್ತಿದ್ದು, ಒಟ್ಟು 20 ಗಣಕ ಯಂತ್ರಗಳಿಗೆ ರೂ. 7,70,000/- ಗಳ ವೆಚ್ಚವಾಗುತ್ತದೆ. ಹಾಗೂ 15 ಪ್ರಿಂಟರ್‌ಗಳನ್ನು ದರಪಟ್ಟಿ ಆಹ್ವಾನಿಸಿ ಖರೀದಿಸಲು ಅಂದಾಜು ರೂ. 99,589/- ವೆಚ್ಚವಾಗುತ್ತದೆ. ಡಿಜಿಎಸ್& ಡಿ ದರದಲ್ಲಿ Acer / Lenova / HCL / HP ಕಂಪನಿಯ ಗಣಕ ಯಂತ್ರಗಳು ಲಭ್ಯವಿರುತ್ತವೆ.

ಕಾರಣ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಒಟ್ಟು 20 ಗಣಕ ಯಂತ್ರಗಳನ್ನು ಕೆಟಿಪಿಪಿ ಕಾಯ್ದೆಯನ್ವಯ ಡಿ.ಜಿ.ಎಸ್ & ಡಿ ದರದಲ್ಲಿ ಹಾಗೂ 15 ಪ್ರಿಂಟರ್‌ಗಳನ್ನು ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ ಖರೀದಿಸಲು ಆರ್ಥಿಕ ಸಮಿತಿ ಸಭೆಯ ಅನುಮತಿ ಕೋರಿದೆ.

**ಸಭೆಯ ತೀರ್ಮಾನ :-**

**ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 20 ಗಣಕ ಯಂತ್ರಗಳನ್ನು ಹಾಗೂ ಅವಶ್ಯ ಪ್ರಿಂಟರ್‌ಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು.**

| | |
|---|---|
| **ವಿಷಯ ಸೂಚಿ ಸಂಖ್ಯೆ - 14** | **ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ವಿಪರೀತ ಜಾಲಿ ಹಾಗೂ ಅನಾವಶ್ಯಕ ಗಿಡ ಗಂಟೆಗಳು ಬೆಳೆದಿದ್ದು, ಜೆಸಿಬಿ ಮುಖಾಂತರ ಸ್ವಚ್ಚಗೊಳಿಸಲು ಅನುಮತಿ ನೀಡುವ ಬಗ್ಗೆ.** |

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಿಮ್ಸ್ ಹಳೆಯ ಬೋಧಕ ಆಸ್ಪತ್ರೆ ಮತ್ತು ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಆವರಣದಲ್ಲಿ ವಿಪರೀತವಾಗಿ ಜಾಲಿ ಗಿಡಗಳು ಹಾಗೂ ಅನಾವಶ್ಯಕ ಗಿಡಗಂಟೆಗಳು ಬಾರಿ ಪ್ರಮಾಣದಲ್ಲಿ ಬೆಳೆದಿರುತ್ತವೆ. ಇದರಿಂದಾಗಿ ಆವರಣದಲ್ಲಿ ವಿಷ ಜಂತುಗಳ ಹಾವಳಿ ಜಾಸ್ತಿಯಾಗಿರುತ್ತದೆ. ಅಲ್ಲದೇ ವಿಷ ಜಂತುಗಳ ಹಾವಳಿಯಿಂದ ಆವರಣದಲ್ಲಿ ವಾಸಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಆವರಣದಲ್ಲಿ ನಡೆದಾಡಲು ಸಹ ಭಯಭೀತರಾಗಿರುತ್ತಾರೆ. ಹಾಗೂ ವಿಪರೀತವಾಗಿ ಅನಾವಶ್ಯಕ ಗಿಡಗಂಟೆಗಳು ಬೆಳೆದಿರುವುದರಿಂದ ಆವರಣವು ಗಲೀಜಾಗಿ ಕಾಣಿಸುತ್ತಿದೆ. ಈ ಹಿನ್ನಲೆಯಲ್ಲಿ ಲೋಕೋಪಯೋಗಿ ಇಲಾಖೆಯನ್ನು ವಿಚಾರಿಸಲಾಗಿ ಒಂದು ವರ್ಷದ ಅವಧಿಗೆ ಜೆಸಿಬಿಯನ್ನು (Memorandum of Understanding) ಒಪ್ಪಂದ ಮಾಡಿಕೊಳ್ಳಲು ಇಚ್ಚೆಯುಳ್ಳ ಗುತ್ತಿಗೆದಾರರಿದ್ದಲ್ಲಿ ತಿಳಿಸುವಂತೆ ದೂರವಾಣಿ ಮುಖಾಂತರ ಕೋರಲಾಗಿತ್ತು. ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಾದ ಶ್ರೀ ನೀತಿಶ್ ಪಾಟೀಲ್ ಇವರು ಒಂದು ವರ್ಷದ ಅವಧಿಗೆ ಸಂಸ್ಥೆಯೊಂದಿಗೆ (Memorandum of Understanding) ಒಪ್ಪಂದ ಮಾಡಿಕೊಳ್ಳಲು ಮುಂದೆ ಬಂದಿದ್ದು, ಸದರಿಯವರ ಬಳಿ ಎರಡು ಜೆಸಿಬಿಗಳಿದ್ದು, ಸಂಸ್ಥೆಯ ವತಿಯಿಂದ ಒಪ್ಪಂದ ಮಾಡಿಕೊಂಡಲ್ಲಿ ಜೆಸಿಬಿ ಕಾರ್ಯನಿರ್ವಹಿಸುವ ಅವಧಿಗೆ ಪ್ರತಿ ಗಂಟೆಗೆ ರೂ. 900/- ಗಳನ್ನು + ಪ್ರತಿ ದಿನಕ್ಕೆ ಜೆಸಿಬಿ ವಾಹನ ಚಾಲಕರ ಭತ್ಯೆ ರೂ. 300/- ಗಳನ್ನು ನಿಗದಿಪಡಿಸಿರುವುದಾಗಿ ಪತ್ರ ಮುಖೇನ ಈ ಕಾರ್ಯಲಯಕ್ಕೆ ಮಾಹಿತಿಯನ್ನು ತಿಳಿಸಿರುತ್ತಾರೆ.

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಕಾರಣ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ವಿಪರೀತ ಜಾಲಿ ಹಾಗೂ ಅನಾವಶ್ಯಕವಾಗಿ ಬೆಳೆದಿರುವ ಗಿಡ ಗಂಟೆಗಳನ್ನು ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಾದ ಶ್ರೀ ನೀತಿಶ್ ಪಾಟೀಲ್ ಇವರೊಂದಿಗೆ ಒಂದು ವರ್ಷದ ಅವಧಿಗೆ (Memorandum of Understanding) ಒಪ್ಪಂದ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

**ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ರಿಮ್ಸ್ ಹಳೆಯ ಬೋಧಕ ಆಸ್ಪತ್ರೆಯ ಆವರಣದಲ್ಲಿ ಬೆಳೆದಿರುವ ಜಾಲಿ ಹಾಗೂ ಅನಾವಶ್ಯಕ ಗಿಡ ಗಂಟೆಗಳನ್ನು ಜೆಸಿಬಿ ಯಂತ್ರದ ಮುಖಾಂತರ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಾದ ಶ್ರೀ ನೀತಿಶ್ ಪಾಟೀಲ್ ಇವರಿಂದ ನಿರ್ವಹಿಸಲು ಅನುಮೋದಿಸಿ, ಸಂಸ್ಥೆಯ ಒಟ್ಟಾರೆ ಪ್ರದೇಶದ ವಿಸ್ತೀರ್ಣವನ್ನು ಇವರಿಂದ ಪರಿಶೀಲಿಸಿ, ವಾಸ್ತವಿಕವಾಗಿ ಅವಶ್ಯವಿರುವ ಅಂದಾಜು ಸಮಯದ ಕುರಿತು ಅಂದಾಜು ಪಟ್ಟಿಯನ್ನು ಧೃಡಿಕರಿಸಿಕೊಂಡು ಚಾಲ್ತಿಯಲ್ಲಿರುವ ನಿಗದಿತ ದರಗಳನ್ವಯ ವೆಚ್ಚವನ್ನು ಪಾವತಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಲಾಯಿತು.**

| | |
|---|---|
| **ವಿಷಯ ಸೂಚಿ ಸಂಖ್ಯೆ – 15** | **ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ರಿಮ್ಸ್ ಬೋಧಕ ಆಸ್ಪತ್ರೆಗೆ ನಿರಂತರ ವಿದ್ಯುತ್ ಪೂರೈಕೆಗಾಗಿ Express Feeder ನ್ನು ಅಳವಡಿಸುವ ಬಗ್ಗೆ.** |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂದಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಹಾಗೂ ಅತಿ ಮೌಲ್ಯವುಳ್ಳ ಉಪಕರಣಗಳನ್ನು ಅಳವಡಿಸಲಾಗಿದ್ದು, ಆಸ್ಪತ್ರೆಗಳಲ್ಲಿ ನಿರಂತರವಾಗಿ ಶಸ್ತ್ರ ಚಿಕಿತ್ಸೆಗಳು ನಡೆಯುತ್ತಿವೆ. ಮತ್ತು ತೀವ್ರ ನಿಘಾ ಘಟಕಗಳು ಸದಾ ರೋಗಿಗಳಿಂದ ತುಂಬಿರುತ್ತವೆ. ರಾಯಚೂರಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಮೇಲಿಂದ ಮೇಲೆ ವ್ಯತ್ಯಯ ಹಾಗೂ ಅತಿಯಾದ ಲೋಡ್ ಶೆಡ್ಡಿಂಗ್ ಉಂಟಾಗುತ್ತಿರುತ್ತವೆ. ಈ ಹಿನ್ನಲೆಯಲ್ಲಿ ಈ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ ಆಡಳಿತ ರಿಮ್ಸ್ ನೂತನ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬೇಸಿಗೆ ಸಮಯದಲ್ಲಿ ವಿದ್ಯುತ್ ಲೋಡ್ ಶಡ್ಡಿಂಗ್‌ನ ಸಮಸ್ಯೆಯನ್ನು ತಪ್ಪಿಸುವ ಹಿನ್ನಲೆಯಲ್ಲಿ ರಿಮ್ಸ್ ನೂತನ ಬೋಧಕ ಆಸ್ಪತ್ರೆ ಹಾಗೂ ಓಪೆಕ್ ಆಸ್ಪತ್ರೆಯ ರೋಗಿಗಳ ಹಿತದೃಷ್ಟಿಯಿಂದ ನಿರಂತ್ರರ ವಿದ್ಯುತ್ ಸರಬರಾಜು ಮಾಡುವ ಸಂಬಂಧ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಇವರಿಂದ Express Feeder ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಳ್ಳಲು ಅನುಮತಿಯನ್ನು ನೀಡಲಾಗಿತ್ತು.

ಈ ಸಂಬಂಧವಾಗಿ ವಿದ್ಯುತ್ ಇಲಾಖೆಗೆ ಪತ್ರ ಬರೆಯಲಾಗಿ ಸದರಿಯವರು ಕಾಮಗಾರಿಯನ್ನು ಸ್ವಯಂ ನಿರ್ಮಾಣ ಯೋಜನೆ ಅಡಿಯಲ್ಲಿ ಟೆಂಡರ್ ಮುಖಾಂತರ ಕೈಗೆತ್ತಿಕೊಳ್ಳಲು ಅವಶ್ಯವಿರುವ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ, ಅನುಮೋದನೆ ನೀಡಲು ರೂ. 13,03,051/– ಗಳನ್ನು ಕರ್ನಾಟಕ ವಿದ್ಯುತ್ ಸರಬರಾಜು ಕಾರ್ಪೋರೇಷನ್ ಲಿಮಿಟೆಡ್, ಮುನಿರಬಾದ್ ಇವರು ಕೋರಿರುತ್ತಾರೆ. ಹಾಗೂ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ಲಿಮಿಡೆಟ್, ರಾಯಚೂರು ಇವರು 11 ಕೆವಿಎ ನಿರಂತರ ವಿದ್ಯುತ್‌ನ್ನು ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರಿಗೆ ಎ.ಪಿ.ಎಂ.ಸಿ ಯಾರ್ಡ್‌ನಿಂದ ಸರಬರಾಜು ಮಾಡಲು ಒಟ್ಟು ರೂ. 17,77,438/– ಗಳು ಹೀಗೆ ಒಟ್ಟು (ರೂ.13,03,051/– + ರೂ.17,77,438/–) ರೂ. 30,80,489/– ಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

ಸಲ್ಲಿಸಲಾಗಿ ಸರ್ಕಾರವು ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ Express Feeder ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಳ್ಳುವ ಕುರಿತು ಪ್ರಸ್ತಾವನೆಯನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ಕ್ರಮ ಕೈಗೊಳ್ಳುವಂತೆ ಸರ್ಕಾರದ ಪತ್ರ ಸಂಖ್ಯೆ. ಆಕುಕ / 165 / ಎಂಎಂಇ / 2015 ದಿನಾಂಕ 13.07.2015ರಲ್ಲಿ ಸೂಚಿಸಿರುತ್ತಾರೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬರುವ ರೋಗಿಗಳ ನಿರಂತರ ಸೇವೆಗೋಸ್ಕರ ಹಾಗೂ ಆಸ್ಪತ್ರೆಗಳ ಕಾರ್ಯಗಳು ಸುಗುಮವಾಗಿ ಸಾಗುವ ಹಿತದೃಷ್ಟಿಯಿಂದ ಅವಶ್ಯವಿರುವ ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ Express Feeder ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಅವಶ್ಯವಿರುವ ರೂ. 30,80,489/- ಗಳ ಅಂದಾಜು ಪಟ್ಟಿಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ರಿಮ್ಸ್ ಬೋಧಕ ಆಸ್ಪತ್ರೆಗೆ ನಿರಂತರ ವಿದ್ಯುತ್ ಪೂರೈಕೆಗಾಗಿ Express Feeder ನ್ನು ರೂ. 30,80,489/- ಗಳ ಮೊತ್ತದಲ್ಲಿ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಅಳವಡಿಸಿ ಕೊಳ್ಳಲು ಮತ್ತು ಈ ಮೊತ್ತವನ್ನು ಸಂಸ್ಥೆಗೆ ಲೆಕ್ಕ ಶಿರ್ಷಿಕೆ 2210 ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದಿಸಲಾಯಿತು.**

| | |
|---|---|
| **ವಿಷಯ ಸೂಚಿ ಸಂಖ್ಯೆ – 16** | **ಶ್ರೀ. ಕೆ.ವಿ. ನಾಗೇಂದ್ರ, ಫರಪ್ಯೂಷನಿಸ್ಟ್, ಓಪೆಕ್ ಆಸ್ಪತ್ರೆ ಇವರಿಗೆ ಸೀನಿಯರ್ ಟ್ಯೂಟರ್ ಹುದ್ದೆಯ ಮೂಲ ವೇತನವನ್ನು ನಿಗದಿ ಪಡಿಸಿ ಪಾವತಿಸಲು ಅನುಮತಿ ನೀಡುವ ಬಗ್ಗೆ.** |

ಸರ್ಕಾರದ ಆದೇಶ ಸಂಖ್ಯೆ ಆಕುಕ / 138 / ಎಂಎಸ್ಎಫ್ / 2011 ದಿನಾಂಕ : 04.02.2013ರನ್ವಯ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಫರಪ್ಯೂಷನಿಸ್ಟ್ ಹುದ್ದೆಯು ಮಂಜೂರಾಗಿದ್ದು, ಈ ಹಿಂದ ನೇರ ಸಂದರ್ಶನದ ಮುಖಾಂತರ ಈ ಹುದ್ದೆಯನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲಾಗಿದೆ. ಆದರೆ ಸದರಿ ಹುದ್ದೆಗೆ ಬಿಎಸ್ಸಿ ಸಿಸಿಟಿ (ಕಾರ್ಡಿಯಾಕ್ ಕೇರ್ ಟೆಕ್ನಾಲಜಿ) ವಿದ್ಯಾರ್ಹತೆ ಅವಶ್ಯಕತೆಯಿರುತ್ತದೆ. ಈ ಹಿನ್ನಲೆಯಲ್ಲಿ ಶ್ರೀ. ಕೆ.ವಿ. ನಾಗೇಂದ್ರ, ಫರಪ್ಯೂಷನಿಸ್ಟ್ ಇವರಿಗೆ ಸರ್ಕಾರವು ನಿಗದಿಪಡಿಸಿರುವ ಮೂಲ ವೇತನ 14,550-26,700/- ರಂತೆ ವೇತನವನ್ನು ನಿಗದಿಪಡಿಸಿ, ಪಾವತಿಸಲಾಗುತ್ತಿದೆ. ಆದರೆ ಶ್ರೀ. ಕೆ.ವಿ. ನಾಗೇಂದ್ರ, ಫರಪ್ಯೂಷನಿಸ್ಟ್ ಇವರುಗಳು ಪ್ರಸ್ತುತ ಸ್ನಾತಕೋತ್ತರ ಪದವಿಯನ್ನು ಮುಕ್ತಾಯಗೊಳಿಸಿದ್ದು, ಸದರಿ ಹುದ್ದೆಗೆ ರೂ. 28100-50100 ಗಳ ವೇತನ ಶ್ರೇಣಿಯಲ್ಲಿ ವೇತನವನ್ನು ನಿಗದಿಪಡಿಸಿ ಪಾವತಿಸುವಂತೆ ಕೋರಿರುತ್ತಾರೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಕೆ.ವಿ. ನಾಗೇಂದ್ರ, ಫರಪ್ಯೂಷನಿಸ್ಟ್, ಇವರ ಸೇವೆಯು ಮುಂಬುರುವ ದಿನಗಳಲ್ಲಿ ಅತಿ ಅವಶ್ಯವಿರುವದರಿಂದ ಹಾಗೂ ಇವರಿಗೆ ಟ್ಯೂಟರ್ ಹುದ್ದೆಯ ವೇತನ ಶ್ರೇಣಿ ರೂ. 28,100-50100 ದಲ್ಲಿ ವೇತನವನ್ನು ನಿಗದಿಪಡಿಸಿ ಪಾವತಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಕೆ.ವಿ. ನಾಗೇಂದ್ರ, ಫರಪ್ಯೂಷನಿಸ್ಟ್, ಇವರ ಮೂಲ ವೇತನವನ್ನು ನಿಗದಿಪಡಿಸುವ ಸಂಬಂಧ ವಿವರವಾದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಆರ್ಥಿಕ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.**

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ – 17 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ವಿಭಾಗಗಳಿಗೆ ಉಪಕರಣಗಳನ್ನು ಮತ್ತು ಇತರೆ ಸಾಮಾಗ್ರಿಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ. |
|---|---|

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಈ ಕೆಳಕಂಡ ವಿಭಾಗಗಳಿಗೆ ಅತಿ ಜರೂರಾಗಿ ವಿವಿಧ ಉಪಕರಣಗಳ ಅವಶ್ಯಕತೆಯಿರುತ್ತದೆ. ಈ ಉಪಕರಣಗಳು ರೋಗಿಗಳ ಚಿಕಿತ್ಸೆಗಾಗಿ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲು ಅವಶ್ಯವಾಗಿ ಬೇಕಾಗಿರುತ್ತವೆ. ಈ ಹಿನ್ನಲೆಯಲ್ಲಿ ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಸದರಿ ಉಪಕರಣಗಳನ್ನು ಅದಷ್ಟು ತ್ವರಿತವಾಗಿ ಖರೀದಿಸಿ ಪೂರೈಸುವಂತೆ ಕೋರಿರುತ್ತಾರೆ. ಅದರ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ. | ವಿಭಾಗದ ಹೆಸರು | ವಿಭಾಗಕ್ಕೆ ಅವಶ್ಯವಿರುವ ಉಪಕರಣದ ಮೊತ್ತ |
|---|---|---|
| 1 | Gastroenterology | ರೂ. 161.00 ಲಕ್ಷಗಳು |
| 2 | Anasthesialogy | ರೂ. 110.00 ಲಕ್ಷಗಳು |
| 3 | Paediatric Surgery | ರೂ. 29.50 ಲಕ್ಷಗಳು |
| 4 | Cardiology | ರೂ. 91.50 ಲಕ್ಷಗಳೂ |
| 5 | Urology | ರೂ. 433.00 ಲಕ್ಷಗಳು |
| 6 | Plastic Surgery | ರೂ. 117.50 ಲಕ್ಷಗಳು |
| 7 | Cathlab Hardware & Other Department requirements | ರೂ. 257.50 ಲಕ್ಷಗಳು |
| | ಒಟ್ಟು ಅವಶ್ಯವಿರುವ ಮೊತ್ತ | ರೂ. 1200.00 ಲಕ್ಷಗಳು |

ಸದರಿ ಉಪಕರಣಗಳನ್ನು ಖರೀದಿಸಲು ಅಂದಾಜು ರೂ. 1200.00 ಲಕ್ಷಗಳ ವೆಚ್ಚವಾಗುತ್ತಿದೆ. ಕಾರಣ ರೋಗಿಗಳ ಹಿತದೃಷ್ಟಿಯಿಂದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಚಿಕಿತ್ಸೆ ನೀಡಲು ಈ ವೆಚ್ಚವನ್ನು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2013–14 ಹಾಗೂ 2014–15 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2210–01–110–2–37–101 (ಯೋಜನೆ) ಅಡಿಯಲ್ಲಿ ಬಿಡುಗಡೆ ಮಾಡಿರುವ ಉಳಿತಾಯವಾಗಿರುವ ಅನುದಾನ ರೂ. 1459.40 ಲಕ್ಷಗಳ ವೆಚ್ಚವನ್ನು ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ವರ್ಷ | ಲೆಕ್ಕಶೀರ್ಷಿಕೆ (2210–01–110–2–37–101 (ಯೋಜನೆ) | ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಒಟ್ಟು ಖರ್ಚಾದ ಅನುದಾನ | ಬಾಕಿ ಉಳಿದ ಅನುದಾನ |
|---|---|---|---|---|---|
| 1 | 2012–13 | Salary & O.E | 10000000.00 | 1248755.00 | 8751245.00 |
| 2 | 2013–14 | Salary & O.E | 0 | | |
| | | Building Maintenance & Repairs | 17500000.00 | 16315668.00 | 1184332.00 |
| | | Equipment Cath & Non Cath | 82500000.00 | 63131469.00 | 47618531.00 |
| 3 | 2014–15 | Equipment Cath & Non Cath | 28250000.00 | | |
| | | | 112500000.00 | 24114000.00 | 88386000.00 |
| | | Total Balance | 250750000.00 | 104809892.00 | 145940108.00 |

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

**ಸಭೆಯ ತೀರ್ಮಾನ :-**

**ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಅವಶ್ಯವಿರುವ ಉಪಕರಣಗಳನ್ನು ಅಂದಾಜು ವೆಚ್ಚ ರೂ. 1200.00 ಲಕ್ಷಗಳ ವೆಚ್ಚದಲ್ಲಿ ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಪೂರೈಸಿ ಕೊಳ್ಳಲು ಅನುಮತಿಯನ್ನು ನೀಡಿ, ವಾಸ್ತಾವಿಕ ವೆಚ್ಚವನ್ನು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2013-14 ಹಾಗೂ 2014-15 ನೇ ಸಾಲಿನಲ್ಲಿ ಲೆಕ್ಕ ಶಿರ್ಷಿಕೆ 2210-01-110-2-37-101 (ಯೋಜನೆ) ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ಮೊತ್ತ ರೂ. 1459.40 ಲಕ್ಷಗಳಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು.**

| | |
|---|---|
| **ವಿಷಯ ಸೂಚಿ ಸಂಖ್ಯೆ - 18** | **ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ಹಾಗೂ ಐಸಿಯು ಘಟಕಕ್ಕೆ 15 ಏಸಿಗಳನ್ನು ಖರೀದಿಸಿ ಅಳವಡಿಸಲು ಅನುಮತಿ ನೀಡುವ ಬಗ್ಗೆ.** |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಎಲ್ಲಾ ಉಪಕರಣ ಹಾಗೂ ಪೀಠೋಪಕರಣಗಳನ್ನು ಹಂತ ಹಂತವಾಗಿ ಹೊಂದಲಾಗುತ್ತಿದೆ. ಈ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಹಾಗೂ ಐಸಿಯು ಘಟಕವು ಕೇಂದ್ರಿಯ ಹವಾ ನಿಯಂತ್ರಣದ ವ್ಯವಸ್ಥೆಯನ್ನು ಹೊಂದದೇ ಇರುವುದರಿಂದ ಮತ್ತು ಸದರಿ ಯೂನಿಟ್‌ಗಳಲ್ಲಿರುವ ಅತ್ಯಾಧುನಿಕರ ಉಪಕರಣಗಳ ಸುರಕ್ಷಕತೆಯ ಹಿತದೃಷ್ಟಿಯಿಂದ ಡಯಾಲಿಸಿಸ್ ಘಟಕಕ್ಕೆ ಹಾಗೂ ತೀವ್ರ ನಿಘಾ ಘಟಕಕ್ಕೆ ಒಟ್ಟು 15 ಏಸಿಗಳನ್ನು (2 ton each) ಅಳವಡಿಸಿಕೊಡುವಂತೆ ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಕೋರಿರುತ್ತಾರೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ಹಾಗೂ ತೀವ್ರ ನಿಘಾ ಘಟಕಕ್ಕೆ ಒಟ್ಟು 15 ಏಸಿಗಳನ್ನು (2 ton each) ನಿಯಮಾನುಸಾರರ ಖರೀದಿಸಿ ಅಳವಡಿಸಲು ಹಾಗೂ 15 ಏಸಿಗಳನ್ನು ಖರೀದಿಸಲು ಅವಶ್ಯವಿರುವ ಅನುದಾನವನ್ನು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬಿಡುಗಡೆಯಾಗಿ ಉಳಿತಾಯವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ಹಾಗೂ ಐಸಿಯು ಘಟಕಕ್ಕೆ 15 ಏಸಿಗಳನ್ನು ಅನುದಾನದ ಲಭ್ಯತೆಯನ್ನು ಪರಿಶೀಲಿಸಿ ಧೃಡಿಕರಿಸಿಕೊಂಡು, ಅನುದಾನ ಲಭ್ಯವಿದ್ದಲ್ಲಿ ಕೆಟಿಪಿಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು.**

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

| ವಿಷಯ ಸೂಚಿ ಸಂಖ್ಯೆ – 19 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಿವಿಎಸ್‌ಎಸ್‌ಡಿ ವಿಭಾಗಗ ಹಾಗೂ ಅನಸ್ತೇಶಿಯ ವಿಭಾಗಗಕ್ಕೆ ಅವಶ್ಯವಿರುವ **ETO Jambo cylinder** ಖರೀದಿಸಲು ಅನುಮತಿ ನೀಡುವ ಬಗ್ಗೆ. |
|---|---|

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಿವಿಎಸ್‌ಎಸ್‌ಡಿ ವಿಭಾಗ ಹಾಗೂ ಅನಸ್ತೇಶಿಯಾ ವಿಭಾಗಗಕ್ಕೆ ETO Jambo cylinder ನ ಅವಶ್ಯಕತೆಯಿದ್ದು, ಸದರಿ ಸಿಲೆಂಡರ್‌ಗಳನ್ನು ಖರೀದಿಸಲು ಈವರೆಗೆ ಯಾವುದೇ ಟೆಂಡರ್‌ನ್ನು ಆಹ್ವಾನಿಸಲಾಗಿರುವುದಿಲ್ಲ. ಪ್ರತಿ ETO Jambo cylinder ಗೆ ಅಂದಾಜು ರೂ. 12,000/– ಗಳಾಗುತ್ತದೆ. ಅನಸ್ತೇಶಿಯ ವಿಭಾಗದ ಉಪಕರಣಗಳನ್ನು ಸ್ವಚ್ಛಗೊಳಿಸಲು ETO Jambo cylinder ನ ಅವಶ್ಯಕತೆಯಿರುತ್ತದೆಯಂದು ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಕೋರಿರುತ್ತಾರೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಿವಿಎಸ್‌ಎಸ್‌ಡಿ ವಿಭಾಗಗ ಹಾಗೂ ಅನಸ್ತೇಶಿಯ ವಿಭಾಗಗಕ್ಕೆ ಅವಶ್ಯವಿರುವ ETO Jambo cylinder ಗಳನ್ನು ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ ಖರೀದಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿದೆ.

**ಸಭೆಯ ತೀರ್ಮಾನ :–**

**ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಿವಿಎಸ್‌ಎಸ್‌ಡಿ ವಿಭಾಗ ಹಾಗೂ ಅನಸ್ತೇಶಿಯ ವಿಭಾಗಗಕ್ಕೆ ಅವಶ್ಯವಿರುವ ETO Jambo cylinder ಗಳನ್ನು ಅಂದಾಜು ರೂ. 12,000/– ದ ಮೊತ್ತದಂತೆ ಅವಶ್ಯ ETO Jambo cylinder ಗಳನ್ನು ಪೂರೈಸಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮೋದನೆ ನೀಡಲಾಯಿತು.**

| ವಿಷಯ ಸೂಚಿ ಸಂಖ್ಯೆ – 20 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |
|---|---|

**1) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳಿಗೆ ತುರ್ತು ಚಿಕಿತ್ಸಾ ಮತ್ತು ಸ್ನಾತಕೋತ್ತರ ಭತ್ಯೆ ಪಾವತಿಸುವ ಬಗ್ಗೆ.**

**ಸಭೆಯ ತೀರ್ಮಾನ :–**

**ಸದರಿ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಈಗಾಗಲೇ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಕಾರ್ಯಾಲಯದ ವತಿಯಿಂದ ಸಮಿತಿ ರಚಿಸಲಾಗಿದ್ದು, ಈ ಸಮಿತಿಯು ಸರ್ಕಾರಕ್ಕೆ ಸಲ್ಲಿಸುವ ಶಿಫಾರಸ್ಸಿನ ಮೇರೆಗೆ ಮುಂದಿನ ಅಗತ್ಯ ಕ್ರಮ ಜರುಗಿಸಲು ಆರ್ಥಿಕ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.**

**ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.**

(ಡಾ. ಕವಿತಾ ಪಾಟೀಲ್),
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಂ. ಲಕ್ಷ್ಮೀ ನಾರಾಯಣ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು